# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-107/2018-19/2873 ದಿನಾಂಕ:04-09-2018

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:- 25-08-2018 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ 25-08-2018 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಪ್ರತಿಗಳು:-**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | –– | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | –– | |
| 4. | 1(ಡಿ) | ಪ್ರೊ.ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ. | ಸದಸ್ಯರು | 18–11–2017 | 17–11–2018 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11–04–2017 | 10–04–2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11–04–2017 | 10–04–2020 |
| 7. | 1(ಎಫ್) | ಡಾ.ಅಶೋಕ ಇಟಗಿ | ಸದಸ್ಯರು | 07–12–2017 | 06–12–2018 |
| 8. | 1(ಎಫ್) | ಶ್ರೀ ಬಸವರಾಜ ಬಾದರ್ಲಿ | ಸದಸ್ಯರು | 07–12–2017 | 06–12–2018 |
| 9. | 1(ಎಫ್) | ಡಾ. ಇಸ್ತಾಕಅಹ್ಮದ ಹವಾಲ್ದಾರ್ | ಸದಸ್ಯರು | 07–12–2017 | 06–12–2018 |
| 10. | 1(ಎಫ್) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | | |
| 11. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 12. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 13. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 14. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 15. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 16. | 1(ಜಿ) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | –– | –– |
| 17. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5–9–2017 | 4–9–2018 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | –– | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | –– | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | –– | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | –– | –– |
| 22. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4–10–2017 | |
| 23. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 4–10–2017 | |

# ದಿನಾಂಕ:25–08–2018 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಗೆ ಹಾಜರಾದ ಸದಸ್ಯರು

1. ಪ್ರೊ. ಸಬಿಹಾ, ಕುಲಪತಿಗಳು : ಸಭಾಧ್ಯಕ್ಷರು
2. ಡಾ.ನೀಲಾಂಬಿಕಾ ಪಟ್ಟಣಶೆಟ್ಟಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ : ಸದಸ್ಯರು
3. ಪ್ರೊ.ಎನ್.ಚಂದ್ರಪ್ಪ : ಸದಸ್ಯರು
4. ಶ್ರೀಮತಿ ಅರುಣಾಕುಮಾರಿ.ಎಸ್.ಕೆ : ಸದಸ್ಯರು
5. ಶ್ರೀಮತಿ ಅನಘಾ ಅಚ್ಯುತ್ ಲಿಮಯೆ : ಸದಸ್ಯರು
6. ಡಾ.ಅಶೋಕ ಇಟಗಿ : ಸದಸ್ಯರು
7. ಡಾ.ಇಸ್ತಾಕ ಅಹ್ಮದ ಹವಾಲ್ದಾರ್ : ಸದಸ್ಯರು
8. ಪ್ರೊ.ಎಸ್.ಬಿ.ಕಾಮಶೆಟ್ಟಿ : ಸದಸ್ಯರು
9. ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
10. ಪ್ರೊ.ಎಲ್.ಆರ್.ನಾಯಕ, ಕುಲಸಚಿವರು : ಸದಸ್ಯ ಕಾರ್ಯದರ್ಶಿ

## ಸಭೆಗೆ ಗೈರು ಹಾಜರಾದ ಸದಸ್ಯರು

1. ಶ್ರೀ.ಬಸವರಾಜ ಬಾದರ್ಲಿ : ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
5. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
6. ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು : ಸದಸ್ಯರು

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

## **ದಿನಾಂಕ: 25-08-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

- ದಿನಾಂಕ:06-07-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:- ದಿನಾಂಕ: 06-07-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- ದಿನಾಂಕ: 25-05-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:- ದಿನಾಂಕ:25-05-2018 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

## ***ಸಿಂಡಿಕೇಟ್ ಐಟಂ ಸಂಖ್ಯೆ: 01***

**ವಿಷಯ:-** ಇಂಗ್ಲೀಷ, ಬಯೋಇನ್ಫಾರ್ಮೆಟಿಕ್ಸ್, ಕನ್ನಡ, ಹಿಂದಿ ಮತ್ತು ವಾಣಿಜ್ಯ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವ ಕುರಿತು.

**ಉಲ್ಲೇಖ:-**1. ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ-1/2018-19/1231, ದಿ:17-07-2018.
2. ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ-1/2018-19/1321, ದಿ:21-07-2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರ ಕಛೇರಿ ಅಧಿಸೂಚನೆಯನ್ವಯ ದಿನಾಂಕ: 23-11-2017 ರಿಂದ ಜಾರಿಗೆ ಬರುವಂತೆ ಇಂಗ್ಲೀಷ ಅಧ್ಯಯನ ವಿಭಾಗದ ಮುಖ್ಯಸ್ಥರ ಚಾರ್ಜನ್ನು **ಪ್ರೊ. ಪಿ. ಕನ್ನನ್,** ಇವರಿಗೆ ವಹಿಸಿಕೊಡಲಾಗಿದೆ.

ಉಲ್ಲೇಖ 2 ರ ಕಛೇರಿ ಅಧಿಸೂಚನೆಯನ್ವಯ ದಿನಾಂಕ: 21-07-2018 ರಿಂದ ಜಾರಿಗೆ ಬರುವಂತೆ ಬಯೋಇನ್ಫಾರ್ಮೆಟಿಕ್ಸ್, ಅಧ್ಯಯನ ವಿಭಾಗದ ಮುಖ್ಯಸ್ಥರ ಸಂಪೂರ್ಣ ಚಾರ್ಜನ್ನು **ಪ್ರೊ. ಸಿ. ಕೆ. ರಮೇಶ** ಇವರಿಗೆ, ಹಿಂದಿ ವಿಭಾಗದ ಮುಖ್ಯಸ್ಥರ ಚಾರ್ಜನ್ನು **ಪ್ರೊ. ನಾಮದೇವಗೌಡ** ಇವರಿಗೆ, ಕನ್ನಡ ವಿಭಾಗದ ಮುಖ್ಯಸ್ಥರ ಚಾರ್ಜನ್ನು **ಪ್ರೊ. ಬಸವರಾಜ ಲಕ್ಕಣ್ಣವರ** ಇವರಿಗೆ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರ ಚಾರ್ಜನ್ನು **ಡೀನರು, ವಾಣಿಜ್ಯ ನಿಕಾಯ** ಇವರಿಗೆ ವಹಿಸಿಕೊಡಲಾಗಿದೆ. ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-** ***ದಿನಾಂಕ:21-07-2018ರಂದು ಹೊರಡಿಸಿರುವ ಅಧಿಸೂಚನೆಗೆ ಘಟನೋತ್ತರ ಅನುಮೋದಿಸಲಾಯಿತು. ವಿವರ ಈ ಕೆಳಗಿನಂತಿದೆ.***

| **ಅಸಂ** | **ಬೋಧಕ ಸಿಬ್ಬಂದಿಯ ಹೆಸರು** | **ವಿಭಾಗದ ಹೆಸರು** | **ಪದನಾಮ** |
|---|---|---|---|
| 1. | ಪ್ರೊ. ಸಿ.ಕೆ.ರಮೇಶ | ಬಯೋಇನ್ಫಾರ್ಮೆಟಿಕ್ಸ್ | ಪ್ರಾಧ್ಯಾಪಕರು |
| 2. | ಪ್ರೊ. ನಾಮದೇವಗೌಡ | ಹಿಂದಿ | ಪ್ರಾಧ್ಯಾಪಕರು |
| 3. | ಪ್ರೊ.ಬಸವರಾಜ ಲಕ್ಕಣ್ಣವರ | ಕನ್ನಡ | ಪ್ರಾಧ್ಯಾಪಕರು |
| 4. | ಡೀನರು ವಾಣಿಜ್ಯ ನಿಕಾಯ | ವಾಣಿಜ್ಯ | -- |

## *ಸಿಂಡಿಕೇಟ್ ಐಟಂ ಸಂಖ್ಯೆ: 02*

ವಿಷಯ:– ಡಾ. ವೆಂಕೋಬಾ ನಾರಾಯಣಪ್ಪಾ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ ಇವರಿಗೆ 2018ನೇ ಸಾಲಿನ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ವೆಂಕೋಬಾ ನಾರಾಯಣಪ್ಪಾ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ ಇವರಿಗೆ ದಿ:1–7–2018 ರಂದು ವಾರ್ಷಿಕ ವೇತನ ಬಡ್ತಿಯನ್ನು ಮಂಜೂರಿಸಬೇಕಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಈ ವಿಷಯ ಕುರಿತು ವಿಚಾರಣೆ ಮಾಡಲು, ಈ ಕೆಳಕಂಡ ಸದಸ್ಯರನೊಳಗೊಂಡ ಸಮಿತಿಯನ್ನು ರಚಿಸಲು ಅಧ್ಯಕ್ಷರು, ಸಿಂಡಿಕೇಟ್ ಸಭೆ ಇವರಿಗೆ ಅಧಿಕಾರ ನೀಡಲಾಯಿತು.**

1. **ಒಬ್ಬ ಸಿಂಡಿಕೇಟ್ ಸದಸ್ಯ**
2. **ಒಬ್ಬ ವಿದ್ಯಾವಿಷಯಕ ಪರಿಷತ್ ಸದಸ್ಯ**
3. **ಒಬ್ಬ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ**
4. **ಒಬ್ಬ ಬಾಹ್ಯ ಸದಸ್ಯ**

## *ಸಿಂಡಿಕೇಟ್ ಐಟಂ ಸಂಖ್ಯೆ: 03*

**ವಿಷಯ:–** ಕಂಪ್ಯೂಟರ್ ಆಪರೇಟರ್ ಹಾಗೂ ತಾಂತ್ರಿಕ ಸಹಾಯಕ ತಾತ್ಕಾಲಿಕ ಹುದ್ದೆಗಾಗಿ ನೇರ ಸಂದರ್ಶನ ಮಾಡಿರುವ ಕುರಿತು.

. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರನ್ವಯ ದಿನಾಂಕ: 07–08–2018 ರಂದು ಕಂಪ್ಯೂಟರ್ ಆಪರೇಟರ್ ಹಾಗೂ ತಾಂತ್ರಿಕ ಸಹಾಯಕ ತಾತ್ಕಾಲಿಕ ಹುದ್ದೆಯ ನೇಮಕಾತಿಗಾಗಿ ನೇರ ಸಂದರ್ಶನ ಮಾಡಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಹಾಗೂ ತಾಂತ್ರಿಕ ಸಹಾಯಕರನ್ನು ತೆಗೆದುಕೊಳ್ಳಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ: 04*

ವಿಷಯ:– ಪ್ರೊ. ಪಿ. ಕನ್ನನ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇಂಗ್ಲೀಷ ಅಧ್ಯಯನ ವಿಭಾಗ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಹುದ್ದೆಗೆ ನಿಯೋಜನೆ ಮೇಲೆ ನಿಯುಕ್ತಿಗೊಳಿಸಿದ ಕುರಿತು.

ಉಲ್ಲೇಖ:–1.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 286 ಯುಎನ್ಇ 2018, ದಿ:13–08–2018.
2.ಸೇವೆಯಿಂದ ಬಿಡುಗಡೆ ಮಾಡಿದ ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ–1/2018–19/2022, ದಿ: 14–8–2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಸರಕಾರದ ಅಧಿಸೂಚನೆ ಮೇರೆಗೆ, ಹಾಗೂ ಸಿಂಡಿಕೇಟ ಸಭೆಯ ಘಟನೋತ್ತರ ಅನುಮತಿ ಮೇರೆಗೆ ಪ್ರೊ. ಪಿ. ಕನ್ನನ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇಂಗ್ಲೀಷ ಅಧ್ಯಯನ ವಿಭಾಗ, ಅಮವಿವಿ, ವಿಜಯಪುರ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಹುದ್ದೆಗೆ ದಿನಾಂಕ: 14–08–2018 ರಂದು ಪೂರ್ವಾಹ್ನ

ನಿಯೋಜನೆ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಇಂಗ್ಲೀಷ ಅಧ್ಯಯನ ವಿಭಾಗದ ಮುಖ್ಯಸ್ಥರ ಚಾರ್ಜನ್ನು ಪ್ರೊ. ನಾಮದೇವಗೌಡ ಇವರಿಗೆ ವಹಿಸಿಕೊಡಲಾಗಿದೆ.

ಆದ್ದರಿಂದ ಸದರಿ ವಿಷಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–ಪ್ರೊ. ಪಿ. ಕನ್ನನ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇಂಗ್ಲೀಷ ಅಧ್ಯಯನ ವಿಭಾಗ, ಅಮವಿವಿ, ವಿಜಯಪುರ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಹುದ್ದೆಗೆ ದಿನಾಂಕ: 14–08–2018 ರಂದು ಪೂರ್ವಾಹ್ನ ನಿಯೋಜನೆ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಲಾಗಿದಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ಪ್ರೊ. ನಾಮದೇವಗೌಡ, ಪ್ರಾಧ್ಯಾಪಕರು ಹಿಂದಿ ಅಧ್ಯಯನ ವಿಭಾಗ ಇವರಿಗೆ ಇಂಗ್ಲೀಷ ಅಧ್ಯಯನ ವಿಭಾಗದ ಮುಖ್ಯಸ್ಥರ ಚಾರ್ಜನ್ನು ನೀಡಿದಕ್ಕೆ ಒಪ್ಪಿಕೊಳ್ಳಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ: 05*

**ವಿಷಯ:–** ಪ್ರೊ.ವಿಜಯಶ್ರೀ ಸಬರದ, ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಇವರಿಗೆ ಕಲಾ ನಿಕಾಯದ ಡೀನರೆಂದು ನಾಮನಿರ್ದೇಶನ ಮಾಡಿದ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೆಂದು ಇಂಗ್ಲೀಷ ಅಧ್ಯಯನ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದ ಪ್ರೊ.ಪಿ.ಕಣ್ಣನ್, ಅವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 21(1)ರ ಮೇರೆಗೆ ಕಲಾ ನಿಕಾಯದ ಡೀನರೆಂದು ದಿನಾಂಕ:03–10–2017 ರಿಂದ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿತ್ತು.

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 286 ಯುಎನ್ಇ 2018, ದಿ:13–08–2018 ಅನ್ವಯ ಪ್ರೊ.ಪಿ.ಕಣ್ಣನ್, ಪ್ರಾಧ್ಯಾಪಕರು, ಅವರನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಹುದ್ದೆಗೆ ನೇಮಕ ಮಾಡಿ ಆದೇಶಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 21(1)ರ ಮಾನ್ಯ ಕುಲಪತಿಗಳ ಪ್ರದತ್ತವಾದ ಅಧಿಕಾರ ಮೇರೆಗೆ ಪ್ರೊ.ವಿಜಯಶ್ರೀ ಸಬರದ, ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಅವರಿಗೆ ಕಲಾ ನಿಕಾಯದ ಡೀನರೆಂದು ದಿನಾಂಕ:14–08–2018 ರಿಂದ ಅನ್ವಯಿಸುವಂತೆ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ ಸದರಿ ವಿಷಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:– **ಪ್ರೊ.ವಿಜಯಶ್ರೀ ಸಬರದ, ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಇವರಿಗೆ ಕಲಾ ನಿಕಾಯದ ಡೀನರೆಂದು ನಾಮನಿರ್ದೇಶನ ಮಾಡಿದಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :– 06*

**ವಿಷಯ:** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಮಂಡ್ಯ ಹೊರಾವರಣ ಕೇಂದ್ರ ಹಾಗೂ ಸಿಂಧನೂರ ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿಗಳಿಗೆ EL ನೀಡುವ ಕುರಿತು.

**ನಿರ್ಣಯ:–ದಿನಾಂಕ:25–08–2018ರಿಂದ ಅನ್ವಯಿಸುವಂತೆ ಮಂಡ್ಯ ಹೊರಾವರಣ ಕೇಂದ್ರ ಹಾಗೂ ಸಿಂಧನೂರ ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿಗಳಿಗೆ EL ನೀಡಲು ಒಪ್ಪಿಕೊಳ್ಳಲಾಯಿತು.(ವಿಶೇಷಾಧಿಕಾರಿಗಳು(ಶೈಕ್ಷಣಿಕ) ಇವರನ್ನು ಹೊರತುಪಡಿಸಿ)**

## ಸಿಂಡಿಕೇಟ್ ಐಟಂ ಸಂಖ್ಯೆ:- 07

**ವಿಷಯ:-** ವಿಶ್ವವಿದ್ಯಾನಿಲಯದ ವಸತಿನಿಲಯದ ಮೆಸ್ ನಡೆಸುವ ಸಲುವಾಗಿ ಟೆಂಡರ್ ನೀಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಸತಿನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿನಿಯರಿಗೆ ಮೆಸ್ ನಡೆಸುವ ಸಲುವಾಗಿ ಇ-ಟೆಂಡರ್ ಮುಖಾಂತರ ದಿನಾಂಕ:4-07-2018ರಂದು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಲ್ಲಿ ಭಾಗವಹಿಸಿದ ಟೆಂಡರ್‌ದಾರರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಟೆಂಡರ್‌ದಾರ ಹೆಸರು |
|---|---|
| 1. | Ashwini Kumar(Nandi Hospitality Services Ltd) |
| 2. | Fakirappa N Yadav (Janapar Seva Samsthe) |
| 3. | Girish Pujari (Industrial Caterers) |
| 4. | Narayana Rathod |
| 5. | S.M.Patil(Bijapur Dist Industrial supply & Marketing Co-Operative Society Ltd) |
| 6. | Santosh Kumar (Rainbow Hospitality Services) |

ದಿನಾಂಕ:30-07-2018ರಂದು Technical Bid ತೆರೆಯಲಾಗಿರುತ್ತದೆ. Tender Scrutiny Committee ಅವರು ಈ ಮೇಲಿನ ಆರು ಜನ ಟೆಂಡರದಾರರ ಅರ್ಜಿಗಳನ್ನು ಪರಿಶೀಲಿಸಿ ಇಬ್ಬರು ಮಾತ್ರ ವಿಶ್ವವಿದ್ಯಾನಿಲಯದ ನಿಯಮಾವಳಿಯ ಪ್ರಕಾರ ಅರ್ಹರಾಗಿರುತ್ತಾರೆ ಎಂದು ಠರಾವು ಮಾಡಿರುತ್ತಾರೆ. ಹಾಗೂ ದಿನಾಂಕ:4-8-2018 Financial Bid ತರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಟೆಂಡರ್‌ದಾರ ಹೆಸರು | ದರ ದಿನಕ್ಕೆ | ದರ ತಿಂಗಳಿಗೆ |
|---|---|---|---|
| 1. | S.M.Patil(Bijapur Dist Industrial supply & Marketing Co-Operative Society Ltd) | 48=50 | 1455/- |
| 2. | Ashwini Kumar(Nandi Hospitality Services Ltd) | 59=00 | 1770/- |

ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಸತಿನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿನಿಯರಿಗೆ ಮೆಸ್ ನಡೆಸಲು ದಿನಾಂಕ:18-08-2018ರಂದು ಶ್ರೀ.ಎಸ್.ಎಂ.ಪಾಟೀಲ (ಅಧ್ಯಕ್ಷರು), ಬಿಜಾಪುರ ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರಿ ಸಂಸ್ಥೆ ನಿಯಮಿತ, ವಿಜಯಪುರ ಇವರಿಗೆ ಆದೇಶ ನೀಡಿದಕ್ಕೆ ಅನುಮೋದಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ: - 08

Subject: Regarding Solar Roof top under BOOT model SECI Scheme.

Ref: 1) Seci/C&Amp;P/Mnre/1000mw122016/Noa/5828 Dt:12/09/2017.
2) Seci/Ps/109/2017/23385 Dt:20/07/2018
3) Cleanmax Enviro Energy Solutions Pvt Ltd Mumbai Letter Dt: 19/07/2018

With reference to the above subject and cited reference letter, the university higher authorities have decided to install solar roof top under BOOT model of SECI scheme of Govt. of India. According to this scheme, provider can install around 85% of the total demand. As per our requirements, present total demand of university is 200KVA for that we are consuming on an average 45000 units/month. For the unit consumed we are paying Rs.6.60/- for per unit consumption. Whereas, solar utility provider will charge Rs.3.83/- per unit consumption. By manipulating the total saving by the installation of solar roof top will be around 40-45% on monthly electricity bill. To install the solar roof top there is no need of any kind of investment except providing area/roof top to install the model. The contract period of the solar roof top scheme is for 25 years followed by the necessary power purchase agreement (PPA) Hence, the project is worth in point of electricity. This matter is place before Syndicate for perusal and further needful action.

*ನಿರ್ಣಯ:– ಅನುಮೋದಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 09*

**ವಿಷಯ:** ಮೇ/ಜೂನ್ 2017ರ ಅವಧಿಮೀರಿದ ಸ್ನಾತಕ ಹಾಗೂ ಸ್ನಾತಕೋತ್ತರ ಉತ್ತರ ಪತ್ರಿಕೆಗಳು, ಬ್ಲೂಬುಕ್ಸ ಹಾಗೂ ಬಿಡಿ ಕಾಗದಗಳು ರದ್ದಿ ವಿಲೇವಾರಿ ಮಾಡಲು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇದರ ಮೇ/ಜೂನ್ 2017ರ ಉಪಯೋಗಿಸಲ್ಪಟ್ಟ ಅವಧಿ ಮೀರಿದ ಸ್ನಾತಕ ಮತ್ತು ಸ್ನಾತಕೋತ್ತರ ಉತ್ತರ ಪತ್ರಿಕೆಗಳು, ಬ್ಲೂಬುಕ್ಸಗಳು ಹಾಗೂ ಬಿಡಿ ಕಾಗದಗಳು ವಿಲೇವಾರಿ ಮಾಡಲು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–* **ಮೇ/ಜೂನ್ 2017ರ ಉಪಯೋಗಿಸಲ್ಪಟ್ಟ ಅವಧಿ ಮೀರಿದ ಸ್ನಾತಕ ಮತ್ತು ಸ್ನಾತಕೋತ್ತರ ಉತ್ತರ ಪತ್ರಿಕೆಗಳು, ಬ್ಲೂಬುಕ್ಸಗಳು ಹಾಗೂ ಬಿಡಿ ಕಾಗದಗಳು ವಿಲೇವಾರಿ ಮಾಡಲು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ:** May/June-2018ರ ಪರೀಕ್ಷೆಯಲ್ಲಿ ನಕಲು ಮಾಡಿದ ವಿದ್ಯಾರ್ಥಿನಿಯರಿಗೆ ಕೈಗೊಂಡ ಕ್ರಮದ ಕುರಿತು.

May/June-2018ರ ಪರೀಕ್ಷೆಯಲ್ಲಿ ನಕಲು ಮಾಡಿದ ವಿದ್ಯಾರ್ಥಿನಿಯರ **"ನಕಲು ಪ್ರಕರಣಗಳ ಪರಿಶೀಲನಾ ಸಮಿತಿ"** ಸಭೆಯು ದಿನಾಂಕ 06.08.2018ರಂದು ಜರುಗಿತು. ಸದರಿ ಸಭೆಯಲ್ಲಿ ನಕಲು ಪ್ರಕರಣ ಪರಿಶೀಲನಾ ಸಮಿತಿ ಸಭೆಯು ನಕಲು ಮಾಡಿದ ವಿದ್ಯಾರ್ಥಿನಿಯರೊಂದಿಗೆ ಚರ್ಚೆ ನಡೆಸಿ ನಕಲು ಮಾಡಿರುವುದು ಖಚಿತವೆಂದು ದೃಢೀಕರಿಸಿ ಹಾಗೂ ಸಭೆಗೆ ಗೈರುಹಾಜರಾದ ವಿದ್ಯಾರ್ಥಿನಿಯರ ನಕಲು ಪತ್ರಿಕೆಗಳನ್ನು ಪರಿಶೀಲಿಸಿ ಸದರಿ ಸಭೆಯ ನಿರ್ಣಯದಂತೆ MPC Act R-2/04 ರನ್ವಯ (1) ಸರ್ಕಾರಿ

ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ಬೈಲಹೊಂಗಲ್‌ದ 02 (ಎರಡು) ವಿದ್ಯಾರ್ಥಿನಿಗಳು ಹಾಗೂ (2) ಶ್ರೀ ಬಸವೇಶ್ವರ ಮಹಿಳಾ ಮಹಾವಿದ್ಯಾಲಯ ಕಲಕೇರಿಯ 03 (ಮೂರು) ವಿದ್ಯಾರ್ಥಿನಿಯರಿಗೆ ಮುಂಬರುವ May/June-19 ರಲ್ಲಿ ನಡೆಯಬೇಕಾದ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಯನ್ನು ನೀಡಬಾರದೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಮುಂದುವರೆದು May/June-2020ರ ರಲ್ಲಿ ಜರುಗುವ ಪರೀಕ್ಷೆಗೆ ಸದರಿ ವಿದ್ಯಾರ್ಥಿನಿಯರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸಲಾಯಿತು. ಹಾಗೂ ಸೈಯಿದಾ ಸಫಿಯಾ ಮಹಿಳಾ ಮಹಾವಿದ್ಯಾಲಯ, ರಾಯಚೂರದ 01 ವಿದ್ಯಾರ್ಥಿನಿಗೆ ಮುಂಬರುವ May/June-19 ರಲ್ಲಿ ನಡೆಯಬೇಕಾದ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಯನ್ನು ನೀಡಲಾಗಿದೆ.

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-ನಕಲು ಪ್ರಕರಣಗಳ ಪರಿಶೀಲನಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

## ಸಿಂಡಿಕೇಟ್ ಐಟಂ ಸಂಖ್ಯೆ : 11

**ವಿಷಯ:** ದಿನಾಂಕ:30-06-2018ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

## ಸಿಂಡಿಕೇಟ್ ಐಟಂ ಸಂಖ್ಯೆ: 12

**ವಿಷಯ:** ದಿನಾಂಕ:06-08-2018ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

## ಸಿಂಡಿಕೇಟ್ ಪುರವಣಿ ಸಂಖ್ಯೆ : 01

**ವಿಷಯ:** ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರಾಸ್ತಿಗಳ ಸಂರಕ್ಷಣೆಗಾಗಿ M/s Leopard Detective and Security Services, Hubballi ರವರಿಗೆ ಕಛೇರಿ ಆದೇಶ ಸಂಖ್ಯೆ: ಅಮವಿವಿ/ಉಗ್ರಾಣ/ಭದ್ರತಾ ಸಿಬ್ಬಂದಿ/2017-18/894 ದಿನಾಂಕ: 24-06-2017ರನ್ವಯ ಸೇವೆಯನ್ನು ಒದಗಿಸಲು ಆದೇಶಿಸಲಾಗಿತ್ತು. ನಂತರ ಸದರಿಯವರ ಅವಧಿಯು ದಿನಾಂಕ: 30-06-2018ಕ್ಕೆ ಮುಕ್ತಾಯಗೊಂಡಿತ್ತು. ಸದರಿರವರ ಅವಧಿಯು ಮುಕ್ತಾಯಗೊಳ್ಳುವ ಪೂರ್ವದಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಧಾನಸಭೆಯ ಚುನಾವಣೆಯ ಪ್ರಕ್ರಿಯೆಯು ಜಾರಿಯಲ್ಲಿ ಇದ್ದಕಾರಣ M/s Leopard Detective and Security Services, Hubballi ರವರ ಸೇವೆಯನ್ನು ಕಛೇರಿ ಆದೇಶ ಸಂಖ್ಯೆ: ಅಮವಿವಿ/ಉಗ್ರಾಣ/ಭದ್ರತಾ ಸಿಬ್ಬಂದಿ/2018-19/921 ದಿನಾಂಕ: 26-06-2018ರನ್ವಯ ದಿನಾಂಕ: 01-07-2018ರಿಂದ 30-09-

2018ರವರೆಗೆ ವಿಸ್ತರಿಸಲಾಗಿರುತ್ತದೆ. ಈಗ ಕರ್ನಾಟಕ ರಾಜ್ಯದಲ್ಲಿ ವಿಧಾನಪರಿಷತ್ ಸದಸ್ಯರ ಆಯ್ಕೆಯ ಪ್ರಕ್ರಿಯೆಯು ಜಾರಿಯಲ್ಲಿದ್ದು, ನೀತಿ ಸಂಹಿತೆಯು ಸಹ ಜಾರಿಯಲ್ಲಿರುವುದರಿಂದ ಭದ್ರತಾ ಸಿಬ್ಬಂದಿಗೆ ಸಂಬಂಧಿಸಿದಂತೆ ಟೆಂಡರ್‌ನ್ನು ಕರೆಯಲು ಸಾಧ್ಯವಾಗುವುದಿಲ್ಲ. ಈ ಕುರಿತಂತೆ ವಿಷಯವನ್ನು ಸಭೆಯ ಅವಗಾಹನೆಗೆ ತರಲಾಗಿದೆ.

**ನಿರ್ಣಯ:– M/s Leopard Detective and Security Services, Hubballi ರವರ ಸೇವೆಯನ್ನು ಕಛೇರಿ ಆದೇಶ ಸಂಖ್ಯೆ: ಅಮವಿವಿ/ಉಗ್ರಾಣ/ಭದ್ರತಾ ಸಿಬ್ಬಂದಿ/2018–19/921 ದಿನಾಂಕ: 26–06–2018ರನ್ವಯ ದಿನಾಂಕ: 01–07–2018ರಿಂದ 30–09–2018ರವರೆಗೆ ವಿಸ್ತರಿಸಲಾಗಿರುವುದಕ್ಕೆ ಒಪ್ಪಿಕೊಳ್ಳಲಾಯಿತು. ಭದ್ರತಾ ಸಿಬ್ಬಂದಿಗೆ ಸಂಬಂಧಿಸಿದಂತೆ ಟೆಂಡರ್‌ನ್ನು ಕರೆಯುವವರೆಗೆ ಸದರಿಯವರ ಸೇವೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

ವಿಷಯ : 2019–20ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನಾ ಶುಲ್ಕವನ್ನು ಶೇಕಡಾ 10% ರಷ್ಟು ಹೆಚ್ಚಿಸುವ ಕುರಿತು.

2019–20ನೇ ಶೈಕ್ಷಣಿಕ ಸಾಲಿಗಾಗಿ ವಿಶ್ವವಿದ್ಯಾನಿಲಯದಿಂದ ಹೊಸ ಕಾಲೇಜು/ಕೋರ್ಸ/ವಿಷಯ/ ಶಾಶ್ವತ/ಶಾಶ್ವತ ನವೀಕರಣ ಮುಂದುವರಿಕೆ ಹಾಗೂ ಸ್ನಾತಕೋತ್ತರ ಕೋರ್ಸಿಗೆ ಮುಂಬರುವ ಮಾಹೆಯಲ್ಲಿ ಸಂಯೋಜನೆ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುವುದರಿಂದ ವಿಶ್ವವಿದ್ಯಾನಿಲಯದ ನಿಯಮಾನುಸಾರ ಪ್ರತಿ ವರ್ಷಕ್ಕೆ ಶೇಕಡಾ 10% ರಷ್ಟು ಶುಲ್ಕವನ್ನು ಹೆಚ್ಚಿಸಿ ಅದರ ಮುಂದಿನ ಸಮ ಸಂಖ್ಯೆ ಮಾಡಿಕೊಳ್ಳುವದರೊಂದಿಗೆ ಶುಲ್ಕವನ್ನು ಹೆಚ್ಚಿಸುವ ಕುರಿತು ಸಿಂಡಿಕೇಟ್ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– 2019–20ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನಾ ಶುಲ್ಕವನ್ನು ಶೇಕಡಾ 10% ರಷ್ಟು ಹೆಚ್ಚಿಸಿ, ಸಂಯೋಜನೆ ಅಧಿಸೂಚನೆ ಹೊರಡಿಸಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

1. ಬಿ.ಎಡ್ ಕೋರ್ಸಿಗೆ ಸರಕಾರಿ ಕೋಟಾದಡಿಯಲ್ಲಿ ಭರ್ತಿಯಾಗದೆ ಉಳಿದಿರುವ ಬಿ.ಎಡ್ ಸೀಟುಗಳನ್ನು ವಿಶ್ವವಿದ್ಯಾನಿಲಯ ಭರಿಸಿಕೊಳ್ಳುವ ಕುರಿತು.
2. ಬಿ.ಎಡ್. ಪ್ರಥಮ ವರ್ಷದಲ್ಲಿ ಪ್ರವೇಶ ಪಡೆದ ಎಸ್.ಸಿ/ಎಸ್.ಟಿ ವಿದ್ಯಾರ್ಥಿನಿಯರನ್ನು ಹೊರತು ಪಡೆಸಿ ಇತರೆ ಪಂಗಡದ ವಿದ್ಯಾರ್ಥಿನಿಯರು ಕೇಂದ್ರಿಕೃತ ದಾಖಲಾತಿ ಘಟಕದಲ್ಲಿ ಭರಿಸಿದ ಬೋಧನಾ ಶುಲ್ಕ ರೂ.3000/– ಗಳನ್ನು ವಿಶ್ವವಿದ್ಯಾನಿಲಯಕ್ಕೆ ಭರಿಸುವ ಕುರಿತು.
3. ಬಿ.ಎಡ್. ಪ್ರಥಮ ವರ್ಷದಲ್ಲಿ ಪ್ರವೇಶ ಪಡೆದ ಎಸ್.ಸಿ/ಎಸ್.ಟಿ ವಿದ್ಯಾರ್ಥಿನಿಯರನ್ನು ಹೊರತು ಪಡೆಸಿ ಇತರೆ ಪಂಗಡದ ವಿದ್ಯಾರ್ಥಿನಿಯರು ಕೇಂದ್ರಿಕೃತ ದಾಖಲಾತಿ ಘಟಕದಲ್ಲಿ ಭರಿಸಿದ ಬೋಧನಾ ಶುಲ್ಕ ರೂ.3000/– ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಳ್ಳುವ ಕುರಿತು. ಮತ್ತು ಸರಕಾರಕ್ಕೆ ಮರು ಪಾವತಿ ಮಾಡದಿರುವುದು.
4. ಈಗಿರುವ 2018–19ನೇ ಶೈಕ್ಷಣಿಕ ಸಾಲಿನ ಎಲ್ಲ ಸ್ನಾತಕೋತ್ತರ ವಿಭಾಗಗಳಿಗೆ ಅನ್ವಯಿಸುವ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕಕ್ಕಿಂತ ಶಿಕ್ಷಣ ಅಧ್ಯಯನ ವಿಭಾಗದ ಎಂ.ಎಡ್ ಕೋರ್ಸಿಗೆ ಬೋಧನಾ ಮತ್ತು ಇತರೆ ಶುಲ್ಕವು ಹೆಚ್ಚಿರುವುದರಿಂದ ಎಲ್ಲ ಸ್ನಾತಕೋತ್ತರ ವಿಭಾಗಗಳಂತೆ ಎಂ.ಎಡ್.ವಿಭಾಗಕ್ಕೆ ಸಹ ಕಡಿಮೆ ಶುಲ್ಕವನ್ನು ಅಳವಡಿಸುವಂತೆ ಮಾಡುವ ಕುರಿತು.

***ನಿರ್ಣಯ:– ಮೇಲಿನ ವಿಷಯದ ಕ್ರಮ.ಸಂಖ್ಯೆ 2 & 3 ಮಾತ್ರ ಒಪ್ಪಿಕೊಳ್ಳಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 04*

ವಿಷಯ : ಇಂಗ್ಲೀಷ ಅಧ್ಯಯನ ವಿಭಾಗಕ್ಕೆ ಇಬ್ಬರು Visiting Professors ನೇಮಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇಂಗ್ಲೀಷ ಅಧ್ಯಯನ ವಿಭಾಗಕ್ಕೆ ಇಬ್ಬರು Visiting Professor ನೇಮಿಸಲು ಮುಖ್ಯಸ್ಥರು ಇಂಗ್ಲೀಷ ಕೋರಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-* ಇಂಗ್ಲೀಷ ಅಧ್ಯಯನ ವಿಭಾಗಕ್ಕೆ ಒಬ್ಬರು Visiting Professor or Emiratus Professor ತೆಗೆದುಕೊಳ್ಳಲು ಒಪ್ಪಿಕೊಳ್ಳಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 05*

ವಿಷಯ : ಶ್ರೀ. ಪ್ರಕಾಶ ಉಡುಪಿಕರ್, ನ್ಯಾಯವಾದಿಗಳು Retainer Advocate ಎಂದು ನೇಮಿಸಿದ ಕುರಿತು.

ಉಲ್ಲೇಖ:- ಶ್ರೀ. ಪ್ರಕಾಶ ಉಡುಪಿಕರ್, ನ್ಯಾಯವಾದಿಗಳು ಇವರ ಮನವಿ ಪತ್ರ ದಿನಾಂಕ:20-07-2018

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ. ಪ್ರಕಾಶ ಉಡುಪಿಕರ್, ನ್ಯಾಯವಾದಿಗಳು ಇವರು ಕಾನೂನು ಸಲಹೆ ನೀಡಿದ (Retainer fee) ಸಂಭಾವನೆಯನ್ನು ದಿನಾಂಕ:1-8-2017 ರಿಂದ 30-06-2018ರ ವರೆಗೆ ಪಾವತಿಸಲು ವಿನಂತಿಸಿದ್ದಾರೆ. ಸದರಿಯವರ ಮನವಿಯನ್ನು ಪರಿಶೀಲಿಸಲಾಗಿ, ಕಛೇರಿ ಆದೇಶ ಸಂಖ್ಯೆ: KSWUV/PMEB/2016-17/519 ದಿನಾಂಕ:15-06-2016ರ ಪ್ರಕಾರ Retainer Advocate ಎಂದು ನೇಮಕ ಮಾಡಿದ ಆದೇಶವು ದಿನಾಂಕ:14-06-2017ರಂದು ಮುಕ್ತಾಯವಾಗಿದೆ. ಪ್ರಸ್ತುತ ಸಂಭಾವನೆ ಪಾವತಿಗಾಗಿ ದಿನಾಂಕ:1-8-2017ರಿಂದ ಅನ್ವಯವಾಗುವಂತ ಶ್ರೀ. ಪ್ರಕಾಶ ಉಡುಪಿಕರ್, ನ್ಯಾಯವಾದಿಗಳು Retainer Advocate ಎಂದು ನೇಮಕ ಮಾಡಿ ಪ್ರತಿಮಾಹೆಗೆ/ ಪ್ರತಿ ವರ್ಷಕ್ಕೆ ಸಂಭಾವನೆಯನ್ನು ನಿಗದಿಪಡಿಸಿದ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 06*

ವಿಷಯ : ಪ್ರೊ.ಎಸ್.ಬಿ.ಮಾಡಗಿ, ಪ್ರಾಧ್ಯಾಪಕರು ಜೈವಿಕ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಇವರು San Francisco USA, ಜರುಗಲಿರುವ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ:- ಪ್ರೊ.ಎಸ್.ಬಿ.ಮಾಡಗಿ, ಪ್ರಾಧ್ಯಾಪಕರು ಜೈವಿಕ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಇವರ ಮನವಿ ಪತ್ರ ದಿನಾಂಕ:01-08-2018

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೊ.ಎಸ್.ಬಿ.ಮಾಡಗಿ, ಪ್ರಾಧ್ಯಾಪಕರು ಜೈವಿಕ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಇವರು ದಿನಾಂಕ:23-10-2018 ರಿಂದ 25-10-2018ರ ವರೆಗೆ San Francisco USA, ಜರುಗಲಿರುವ ಅಂತರ್‌ರಾಷ್ಟ್ರೀಯ ಸಮ್ಮೇಳನಕ್ಕೆ ಅವರ ಪತ್ರಿಕೆ "Docking Studies

onb Phytochemcial Derivatives As Tisssue Transglutaminasa-2(TG2 Inhivitors Against Lung Concer" ಆಯ್ಕೆಯಾಗಿದ್ದು ಎಂದು ಉಲ್ಲೇಖಿತ ಪತ್ರದನ್ವಯ ತಿಳಿಸಿರುತ್ತಾರೆ. ಈ ಪತ್ರಿಕೆ ದಿನಾಂಕ:01-08-2018ರಂದು ಜರುಗಿದ Department Council ಸಭೆಯಲ್ಲಿ ಮಂಡಿಸಿ ಸಮ್ಮೇಳನದಲ್ಲಿ ಭಾಗವಹಿಸಲು ಶಿಫಾರಸ್ಸು ಮಾಡಿರುತ್ತಾರೆ. ಕಾರಣ ಸದರಿ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಕೋರಿರುವರು ಹಾಗೂ ಪ್ರಯಾಣ ಭತ್ಯೆ/ದಿನ ಭತ್ಯೆ ಮಂಜೂರಿಸಲು ವಿನಂತಿಸಿರುವರು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-*** **ಪ್ರೊ.ಎಸ್.ಬಿ.ಮಾಡಗಿ, ಪ್ರಾಧ್ಯಾಪಕರು ಜೈವಿಕ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಇವರಿಗೆ ಆರ್ಥಿಕ ನೆರವು ಹೊರತುಪಡಿಸಿ ದಿನಾಂಕ:23-10-2018 ರಿಂದ 25-10-2018 ರ ವರೆಗೆ San Francisco USA, ಜರುಗಲಿರುವ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಲಾಯಿತು. ಆರ್ಥಿಕ ನೆರವಿಗಾಗಿ(ಪ್ರಯಾಣ ಭತ್ಯೆ/ದಿನಭತ್ಯೆ) DST/DBT-BIF/ಇತರೆ ಯೋಜನೆಗಳಿಗೆ ಸಂಪರ್ಕಿಸಬೇಕೆಂದು ಸೂಚಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 07*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯದ ಪ್ರಯೋಗಾಲಯ ಸಾಮಗ್ರಿಗಳನ್ನು ಪೂರೈಸಿದ ಹಾಗೂ ಸದರಿಯವರಿಗೆ ಹಣ ಪಾವತಿಯಾಗದಿರುವ ಕುರಿತು.

**ಪ್ರಸ್ತಾವನೆ:**

Nvis Technioligies Pvt. Ltd, Indore ನವರ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಈ ಕೆಳಕಂಡ ಪ್ರಯೋಗಾಲಯ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯದ ಆದೇಶಕ್ಕೆನುಗುಣವಾಗಿ 2013ರ, 04 ಡಿಸೆಂಬರ್‌ಂದು ಪೂರೈಸಿರುವದಾಗಿ ತಿಳಿಸಿರುತ್ತಾರೆ.

| Sl.no | Product Details | Quantity |
|---|---|---|
| 1. | Hall Effect Training System Model :NVis 6101 | 01 |
| 2. | Resistivity and Band –Gap Measurement | 01 |
| 3. | Suspectibility of Paramagnetic Materials by Quincks Tube method Model: Nvis 6105 | 01 |
| 4. | Callender and Griffith's Bridge Trainer Model : Nvis 6035 | |

ಅದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ದಿನಾಂಕ:26-01-2014ರಂದು ಒಟ್ಟು 1,25,667=00 ಮೊತ್ತಕ್ಕೆ ಸಲ್ಲಿಸಿದ್ದರೂ ಈವರೆಗೆ ಪಾವತಿಯಾಗಿರುವದಿಲ್ಲ ಎಂಬ ಕಾರಣಕ್ಕೆ ಸದರಿ ಕಂಪನಿಯವರು ತಮ್ಮ ವಕೀಲರ ಮುಖಾಂತರ ನೋಟಿಸ್ ನೀಡಿರುತ್ತಾರೆ. ಮತ್ತು ಅಧ್ಯಕ್ಷರು Facilitation Council for MSME office of the Industries Commission, Vidyachal Bhavan, Bhopal ಇವರಲ್ಲಿ ದೂರು ದಾಖಲಿಸಿರುತ್ತಾರೆ. ಕಾರಣ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ. ಈ ಮೇಲ್ಕಂಡ ಸಾಮಗ್ರಿಗಳು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದೆ. ಆದರೆ ಅಂದಿನ ವಿಭಾಗದ ಸಂಚಾಲಕರು ಮತ್ತು ಉಗ್ರಾಣ ವಿಭಾಗದ ವಿಷಯ ನಿರ್ವಾಹಕರು ಅಂತಹ ಯಾವುದೇ ಸಾಮಗ್ರಿಗಳನ್ನು ಖರೀದಿಸಿರುವದಿಲ್ಲ ಎಂದು ತಿಳಿಸಿರುತ್ತಾರೆ.

ಇಂತಹ ಘಟನೆಗಳಿಂದ ವಿಶ್ವವಿದ್ಯಾನಿಲಯದ ಘನತೆಗೆ ಕುಂದು ಬರುವದರಿಂದ ಮತ್ತು ಮುಂಬರುವ ಖರೀದಿ ಪ್ರಕ್ರಿಯೆಯಲ್ಲಿ ಸರಬರಾಜುದಾರರು ಹಿಂದೇಟು ಹಾಕಬಹುದಾದ್ದರಿಂದ, ವಿಶ್ವವಿದ್ಯಾನಿಲಯ ತನ್ನ ಪಾರದರ್ಶಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಮಗ್ರವಾಗಿ ಈ ಖರೀದಿ ಪ್ರಕ್ರೀಯೆ ಮತ್ತು ಬಿಲ್ ಪಾವತಿಯಾಗದಿರುವ ಕುರಿತು ಸಮಗ್ರ ತನಿಖೆ ನಡೆಸುವ ಅಗ್ಯತೆವಿದೆ.

ನಿರ್ಣಯ:– ಈ ಖರೀದಿ ಪ್ರಕ್ರೀಯೆ ಮತ್ತು ಬಿಲ್ ಪಾವತಿಯಾಗದಿರುವ ಕುರಿತು ಸಮಗ್ರ ತನಿಖೆ ನಡೆಸಲು ಈ ಕೆಳಕಂಡ ಸದಸ್ಯರನೊಳಗೊಂಡ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

1. ಒಬ್ಬ ಸಿಂಡಿಕೇಟ್ ಸದಸ್ಯ
2. ಒಬ್ಬ ವಿದ್ಯಾವಿಷಯಕ ಪರಿಷತ್ ಸದಸ್ಯ
3. ಬೇರೆ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು(ವಿಷಯ ತಜ್ಞರು)
4. ಒಬ್ಬ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ
5. ವಿಭಾಗದ ಸಂಯೋಜಕರು

ಕುಲಸಚಿವರು ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ